ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು,**
**ನೃಪತುಂಗ ರಸ್ತೆ, ಬೆಂಗಳೂರು**

**ಸಂಖ್ಯೆ : ಸಿ5(2)ವರ್ಗ-01/2013-14** **ದಿನಾಂಕ : 10-07-2013**

**ಅಧಿಕೃತ ಜ್ಞಾಪನ**

**ವಿಷಯ:-** 2013-14 ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯಲ್ಲಿನ ಬೋಧಕೇತರ ವೃಂದದ ಅಧಿಕಾರಿ ಮತ್ತು ಸಿಬ್ಬಂದಿಗಳ ವರ್ಗಾವಣೆ ಕುರಿತು.

ಉಲ್ಲೇಖ:- ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 22 ಸೇನೌವ 2013 ದಿನಾಂಕ:07-06-2013.
2 :- ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 22 ಸೇನೌವ 2013 ದಿನಾಂಕ:14-06-2013.
3:- ಸರ್ಕಾರದ ಅದೇಶ ಸಂಖ್ಯೆ:ಸಿಆಸುಇ 22 ಸಏನೌವ 2013 ದಿನಾಂಕ:01-07-2013
4:- ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ ದಿನಾಂಕ:14-6-2013

-*****-

ಪ್ರಸ್ತಾವನೆ:-

ಉಲ್ಲೇಖ-1 ರ ಸರ್ಕಾರದ ಅದೇಶದಲ್ಲಿ ಸರ್ಕಾರಿ ನೌಕರರ ವರ್ಗಾವಣೆಗಳ ಬಗ್ಗೆ ಮಾರ್ಗ ಸೂಚಿಗಳನ್ನು ಹೊರಡಿಸಲಾಗಿದೆ ಹಾಗೂ (2) ರಲ್ಲಿ ಸದರಿ ಮಾರ್ಗಸೂಚಿಗೆ ತಿದ್ದುಪಡಿಯನ್ನು ಹೊರಡಿಸಲಾಗಿದೆ. ಉಲ್ಲೇಖಿತ (3) ರ ಆದೇಶದಲ್ಲಿ ವರ್ಗಾವಣೆಯ ದಿನಾಂಕವನ್ನು ಮುಂದೂಡಿ ಆದೇಶಿಸಲಾಗಿದೆ. ಉಲ್ಲೇಖಿತ (1) ಮತ್ತು (2) ರ ಸರ್ಕಾರದ ಆದೇಶಗಳಲ್ಲಿನ ಸೂಚನೆಗಳು ಹಾಗೂ ಮಾರ್ಗ ಸೂಚಿಗಳನ್ವಯ 2013-14 ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯದ ಆಡಳಿತ ವ್ಯಾಪ್ತಿಯಲ್ಲಿ ಬರುವ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಅಧಿಕಾರಿ ಹಾಗೂ ಸಿಬ್ಬಂದಿಗಳ ವರ್ಗಾವಣೆಗಳನ್ನು ಸಾರ್ವಜನಿಕ ಹಿತ ದೃಷ್ಟಿಯಿಂದ ಮಾಡಲು ನಿರ್ಧರಿಸಲಾಗಿದೆ. ಅದರಂತೆ ಈ ಕೆಳಕಂಡ ಆದೇಶ.

ಆದೇಶ:-

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೆಳಕಂಡ ಬೋಧಕೇತರ ವರ್ಗದ ಅದಿಕಾರಿ ಹಾಗೂ ಸಿಬ್ಬಂದಿಗಳನ್ನು ಅವರ ಹೆಸರಿನ ಮುಂದೆ ಸೂಚಿಸಿರುವ ಸ್ಥಳಕ್ಕೆ ಕೆಳಕಂಡ ಷರತ್ತಿಗೊಳಪಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಸಾರ್ವಜನಿಕ ಹಿತದೃಷ್ಟಿಯಿಂದ ವರ್ಗಾಯಿಸಿ ಆದೇಶಿಸಿದೆ.

| ಕ್ರಮ ಸಂಖ್ಯೆ | **ಅಧಿಕಾರಿಗಳು ಹಾಗೂ ಸಿಬ್ಬಂಧಿಯ ಹೆಸರು, ಹುದ್ದೆ ಮತ್ತು ವಿಳಾಸ**<br>ಶ್ರೀ / ಶ್ರೀಮತಿ | **ವರ್ಗಾವಣೆ ಮಾಡಿರುವ ಸ್ಥಳ** |
|---|---|---|
| 1. | ಶ್ರೀಮತಿ ಸುಜಾತ.ಎಂ. ಪ್ರ.ದ.ಸ., ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-3 | ಸರ್ಕಾರಿ ಪ್ರೌಢ ಶಾಲೆ, ಜಾಲಹಳ್ಳಿ, ಉತ್ತರ ವಲಯ-2, ಬೆಂಗಳುರು (ಶ್ರೀ ಆರ್. ರವಿಚಂದ್ರ ಇವರ ಸ್ಥಳಕ್ಕೆ) |
| 2. | ಆರ್. ರವಿಚಂದ್ರ, ಪ್ರ.ದ.ಸ., ಸರ್ಕಾರಿ ಪ್ರೌಢ ಶಾಲೆ, ಜಾಲಹಳ್ಳಿ, ಉತ್ತರ ವಲಯ-2, ಬೆಂಗಳೂರು. | ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-3 (ಶ್ರೀಮತಿ ಸುಜಾತ .ಎಂ. ಇವರ ಸ್ಥಳಕ್ಕೆ) |

ಷರತ್ತುಗಳು:-

1. ವರ್ಗಾವಣೆ ಹೊಂದಿರುವ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಕೂಡಲೇ ಕರ್ತವ್ಯದಿಂದ ಬಿಡುಗಡೆಗೊಳಿಸಿ ವರ್ಗಾಯಿತ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗುವಂತೆ ತಿಳಿಸುವುದು.
2. ಬಿಡುಗಡೆ ಹಾಗೂ ಹಾಜರಾದ ಬಗ್ಗೆ ಈ ಕಛೇರಿಗೆ ಮತ್ತು ಸಂಬಂಧಿಸಿದ ಎಲ್ಲಾ ಮೇಲಾಧಿಕಾರಿಗಳಿಗೆ ವರದಿ ಮಾಡುವುದು.

(ಮೊಹಮ್ಮದ್ ಮೊಹಸಿನ್)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

ಗೆ,

3. ಸಂಬಂಧಿಸಿದ ಕಛೇರಿ, ಶಾಲಾ ಮತ್ತು ಕಾಲೇಜುಗಳ ಮುಖ್ಯಸ್ಥರಿಗಳಿಗೆ ಮುಂದಿನ ಕ್ರಮಕ್ಕಾಗಿ.
4. ಸಂಬಂಧಿಸಿದ ನೌಕರರಿಗೆ

ಪ್ರತಿಯನ್ನು:-

5. ಸರ್ಕಾರದ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಕ್ಷಣ ಇಲಾಖೆ ಬಹುಮಡಿ ಕಟ್ಟಡ, ಬೆಂಗಳೂರು
6. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ ಬೆಂಗಳೂರು
7. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
8. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ.
9. ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪ್ರಾದೇಶಿಕ ಪರೀಕ್ಷಾ ಮಂಡಳಿ. ಮೈಸೂರು,
10. ಬೆಂಗಳೂರು ಮತ್ತು ಮೈಸೂರು ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲ ಉಪನಿರ್ದೇಶಕರಗಳಿಗೆ ಮುಂದಿನ ಕ್ರಮಕ್ಕಾಗಿ.
11. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ
12. ಕಛೇರಿ ಪ್ರತಿ